**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10025/2023**

ಪಿಡಬ್ಲೂ– 2

ಸಿಡಬ್ಲೂ– 2

| | | |
|---|---|---|
| ಸಾಕ್ಷಿ ಹೆಸರು | – | ವಿವೇಕ್ ಪಾಟೀಲ್ |
| ತಂದೆ ಹೆಸರು | – | ವೀರಭದ್ರಪ್ಪ ಗೌಡ |
| ವಯಸ್ಸು | – | 35 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸಃ | – | ಹಂಚಿ ಗ್ರಾಮ , ಸೊರಬ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 10–03–2026.**

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>**

ಚಾಸಾ–3 ಹನುಮಂತಗೌಡ ಗೊತ್ತು. ಚಾಸಾ–1, ಚಾಸಾ–4 ರಿಂದ 6 ಗೊತ್ತಿಲ್ಲ. ಚಾಸಾ–1 ರವರು ಈ ಪ್ರಕರಣದಲ್ಲಿ ಸ್ಫೋಟಕ ವಸ್ತುಗಳನ್ನು ಬಳಸಿ ಕಲ್ಲು ಕ್ವಾರೆ ನಡೆಸಿದ ಬಗ್ಗೆ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಮು ಮಾ – 1 ರಿಂದ 21 ನ್ನು ಪೋಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿತರು ಗೊತ್ತಿಲ್ಲ. ಈಗ ತೋರಿಸಿದ ನಿಪಿ –1 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ

1(ಎಫ್) ಎಂದು ಗುರುತಿಸಲಾಯಿತು. ದಿನಾಂಕಃ 25–03–2015 ರಲ್ಲಿ ನಾನು ಆನವಟ್ಟಿಯಿಂದ ಹೋಗಬೇಕಾದರೆ ರಸ್ತೆ ಬದಿಯಲ್ಲಿ ಪೋಲೀಸರು ನಿಂತಿದ್ದರು. ಪೋಲೀಸರು ನನ್ನನ್ನು ಕರೆದು ಸದರಿ ದಾಖಲೆಯನ್ನು ತೋರಿಸಿ ಒಂದು ಸಹಿ ಹಾಕಲು ಹೇಳಿದರು. ಆದ್ದರಿಂದ ನಾನು ಸಹಿ ಹಾಕಿರುತ್ತೇನೆ. ಪೋಲೀಸರು ಯಾವ ವಿಚಾರಕ್ಕೆ ನನ್ನ ಸಹಿಯನ್ನು ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ.

**(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ದಿನಾಂಕಃ 25–03–2015 ರಂದು ಚಾಸಾ1 ರವರು ನನ್ನನ್ನು ಮತ್ತು ಚಾಸಾ3 ರವರನ್ನು ಮತ್ತು ಗ್ರಾಮ ಲೆಕ್ಕಾಧಿಕಾರಿಗಳಾದ ಚಾಸಾ 4 ರಿಂದ 6 ರವರನ್ನು ಬೆಲವಂತನಕೊಪ್ಪ ಗ್ರಾಮದ ಸ.ನಂಃ 100 ರಲ್ಲಿ 1 ನೇ ಆರೋಪಿ ನಡೆಸಿದ್ದ ಕಲ್ಲು ಕ್ವಾರೆಗೆ ಕರೆದುಕೊಂಡು ಹೋಗಿದ್ದರು, ಸದರಿ ಸ್ಥಳವನ್ನು ಪರಿಶೀಲನೆ ಮಾಡಿದಾಗ ಸದರಿ ಸ್ಥಳದಲ್ಲಿ 1 ನೇ ಆರೋಪಿ ಸ್ಫೋಟಕ ವಸ್ತುಗಳನ್ನು ಬಳಸಿ ಕಲ್ಲು ಬಂಡೆಗಳನ್ನು ಸ್ಫೋಟಿಸಿರುವುದು ಕಂಡುಬಂತು. ನಂತರ ಅದೇ ರೀತಿ 2 ರಿಂದ 6 ನೇ ಆರೋಪಿತರು ನಡೆಸುತ್ತಿದ್ದ ಕಲ್ಲು ಕ್ವಾರೆಗೆ ಹೋಗಿ ದಾಳಿ ಮಾಡಿ ಮತ್ತು ಆರೋಪಿತರು ನಡೆಸುತ್ತಿದ್ದ ಕಲ್ಲು ಕ್ವಾರಿಗಳಿಂದ

ನ್ಯಾಯಾಲಯದ ಮುಂದೆ ಇರುವ ಮು ಮಾ 1 ರಿಂದ ಮು ಮಾ 21 ವಸ್ತುಗಳನ್ನು ನನ್ನ ಹಾಗೂ ಚಾಸಾ3 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಚಾಸಾ1 ರವರು ನಿಪಿ –1 ರಂತೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ ವರೆಗೆ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ –1 ಮಹಜರ್ ದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ವಿಚಾರಗಳು ನನಗೆ ಸಂಪೂರ್ಣವಾಗಿ ಗೊತ್ತಿದ್ದರೂ ಸಹ, ಚಾಸಾ1 ರವರು ಆರೋಪಿತರ ಕಲ್ಲು ಕ್ವಾರೆಯಲ್ಲಿ ದಾಳಿ ಮಾಡಲು ಹೋದಾಗ ನಾನು ಸ್ಥಳದಲ್ಲಿ ಇದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).